5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10001/2022

ಪಿಡಬ್ಲೂ- 8
ಸಿಡಬ್ಲೂ- 12

| | | |
|---|---|---|
| ಸಾಕ್ಷಿ ಹೆಸರು | - | ಸುದೀಪ್ ನಾಯ್ಕ್ |
| ತಂದೆ ಹೆಸರು | - | ಸಿದ್ಧಾನಾಯ್ಕ್ |
| ವಯಸ್ಸು | - | 22 ವರ್ಷ |
| ಉದ್ಯೋಗ | - | ಚಿಕನ್ ವ್ಯಾಪಾರ |
| ವಾಸಃ | - | ರಿಪ್ಪನ್ ಪೇಟೆ |

ಪ್ರಮಾಣ ವಚನ ಭೋದಿಸಿದ ದಿನಾಂಕಃ 05-04-2024

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಪ್ರಾ ಸಾ -1 ನನ್ನ ಅಣ್ಣ. ಪ್ರಾ ಸಾ 2 ನನ್ನ ಅಣ್ಣನ ಸ್ನೇಹಿತನಾಗಿದ್ದು ಅವರು ನನಗೆ ಪರಿಚಯ ಇರುತ್ತಾರೆ. ಚಾಸಾ -11 ನನ್ನ ಅಕ್ಕ. ನನಗೆ ಪ್ರಾ ಸಾ -2, ಚಾಸಾ-13 ಮತ್ತು ಚಾಸಾ-14 ರವರು ಪರಿಚಯ ಇದೆ. ನನ್ನ ತಂದೆ ಹಮಾಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಮನೆಕೆಲಸ ಮಾಡುತ್ತಾರೆ. ನನಗೆ ದೀಪಾ , ಸಂಧ್ಯಾ, ಸೌಮ್ಯ ಎಂಬ ಮೂರು ಅಕ್ಕಂದಿರು ಇರುತ್ತಾರೆ. ಘಟನೆಯ ಸಮಯದಲ್ಲಿ ದೀಪಾ ಮತ್ತು ಸೌಮ್ಯರವರಿಗೆ ಮದುವೆ ಆಗಿತ್ತು. ಚಾಸಾ-11 ರವರು ಸಾಗರದ ಗಾರ್ಮೆಂಟ್ಸ್ ಗೆ ದಿನಾಲೂ ಕೆಲಸಕ್ಕೆ ಹೋಗುತ್ತಿದ್ದಳು. ಚಾಸಾ-11 ಸಾಗರ ಗಾರ್ಮೆಂಟ್ಸ್ ಗೆ ರಿಪ್ಪನ್ ಪೇಟೆಯಿಂದ ಬಸ್ಸಿನಲ್ಲಿ ಓಡಾಡುತ್ತಿದ್ದಳು. ನನ್ನ ಅಣ್ಣ ಶಿವಮೊಗ್ಗದಲ್ಲಿ ಕೆಲಸ ಮಾಡುತ್ತಾನೆ. ನಾನು ರಿಪ್ಪನ್ ಪೇಟೆಯಲ್ಲಿ ಚಿಕನ್ ಅಂಗಡಿ ಇಟ್ಟುಕೊಂಡಿದ್ದೇನೆ.

ಚಾಸಾ-11 ರವರು ಗಾರ್ಮೆಂಟ್ಸ್ ಗೆ ಹೋಗುವಾಗ ಮತ್ತು ಬರುವಾಗ 1 ನೇ ಆರೋಪಿ ತೊಂದರೆ ಕೊಡುತ್ತಿದ್ದನು. ದಾರಿಯಲ್ಲಿ ಹೋಗುವಾಗ ಮತ್ತು ಬರುವಾಗ 1 ನೇ ಆರೋಪಿ ಚಾಸಾ-11 ರವರಿಗೆ ಚುಡಾಯಿಸುತ್ತಿದ್ದನು. 1 ನೇ ಆರೋಪಿ ಯಾವ ರೀತಿ ಚಾಸಾ-11 ರವರಿಗೆ

ಚುಡಾಯಿಸುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಚಾಸಾ-11 ರವರು 1 ನೇ ಆರೋಪಿಗೆ ನನಗೆ ತೊಂದರೆ ಕೊಡಬೇಡ ನನ್ನ ತಂಟೆಗೆ ಬರಬೇಡ ಎಂದು ಹೇಳಿರುತ್ತಾಳೆ. ಈ ರೀತಿ ಹೇಳಿದ ನಂತರವೂ ಸಹ 1 ನೇ ಆರೋಪಿ ಚುಡಾಯಿಸುವುದನ್ನು ಮುಂದುವರೆಸಿರುತ್ತಾನೆ. ನಂತರ ಪ್ರಾ ಸಾ -11 ರವರು ಈ ವಿಚಾರವನ್ನು ನಮ್ಮ ಮನೆಯಲ್ಲಿ ಹೇಳಿರುತ್ತಾಳೆ. ಈ ವಿಷಯ ನಮಗೆ ಗೊತ್ತಾದ ನಂತರ ನನ್ನ ಅಣ್ಣ ಪ್ರಾ ಸಾ -1 ರವರು 1 ನೇ ಆರೋಪಿಗೆ ವಾರ್ನ್ ಮಾಡಿರುತ್ತಾನೆ.

ಸುಮಾರು 4-5 ವರ್ಷಗಳ ಹಿಂದೆ ರಿಪ್ಪನ್ ಪೇಟೆಯ ಹಿಂದೂ ಮಹಾ ಗಣಪತಿಯ ವಿಸರ್ಜನಾ ಕಾರ್ಯಕ್ರಮ ಇದ್ದು ಮೆರವಣಿಗೆಯನ್ನು ನೋಡಲು ನಮ್ಮ ಕುಟುಂಬದವರು ಎಲ್ಲರೂ ಹೋಗಿರುತ್ತೇವೆ. ನಮ್ಮ ಕುಟುಂಬದವರಲ್ಲದೇ ಅಕ್ಕಪಕ್ಕದವರು ಸಹ ಬಂದಿದ್ದರು. ಸಾಯಂಕಾಲ ಸುಮಾರು 6-40 ಗಂಟೆ ಸಮಯದಲ್ಲಿ ಚಾ ಸಾ 14 ರವರ ಮನೆಯ ಬಳಿ ಪ್ರಾ ಸಾ -1, ಪ್ರಾ ಸಾ 7 ರವರು ಮತ್ತು 1 ರಿಂದ 4 ನೇ ಆರೋಪಿತರ ನಡುವೆ ಗಲಾಟೆ ಆಗಿರುತ್ತದೆ. 1 ರಿಂದ 4 ನೇ ಆರೋಪಿತರು ಪ್ರಾ ಸಾ -1 ಮತ್ತು ಪ್ರಾ ಸಾ7 ರವರ ಜೊತೆ ಜಗಳ ಮಾಡಿ 1 ನೇ ಆರೋಪಿ ಪ್ರಾ ಸಾ -1 ರವರಿಗೆ ಚಾಕುವನ್ನು ಹಾಕಿರುತ್ತಾನೆ. 2 ನೇ ಆರೋಪಿ ಪ್ರಾ ಸಾ -7 ರವರಿಗೆ ಚಾಕು ಹಾಕಿರುತ್ತಾನೆ. ಪ್ರಾ ಸಾ -1 ರವರು ವಾರ್ನ್ ಮಾಡಿದ್ದರಿಂದ 1 ನೇ ಆರೋಪಿ ಪ್ರಾ ಸಾ -1 ರವರಿಗೆ ಚಾಕುವನ್ನು ಹಾಕಿರುತ್ತಾನೆ. ಅವರು ಚಾಕು ಹಾಕುವಾಗ ಏನು ಹೇಳಿ ಚಾಕು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ಆರೋಪಿತರು ಚಾಕು ಹಾಕುವ ಸಮಯದಲ್ಲಿ 3 ಮತ್ತು 4 ನೇ ಆರೋಪಿತರು ಏನು ಹೇಳಿದರು ಎಂದರೆ ಏನೂ ಹೇಳಲಿಲ್ಲ ಎಂದು ನುಡಿಯುತ್ತಾರೆ. ಸದರಿ ಜಗಳವನ್ನು ಚಾಸಾ-13 ಮತ್ತು ಚಾಸಾ-14 ರವರು ಬಿಡಿಸಿರುತ್ತಾರೆ. ಆಗ ಆರೋಪಿತರು ಎಲ್ಲರೂ ಓಡಿ ಹೋಗಿರುತ್ತಾರೆ. ಆರೋಪಿತರು ಓಡಿ ಹೋಗುವ ಸಮಯದಲ್ಲಿ ಚಾಕುವನ್ನು ಬಿಸಾಡಿ ಹೋಗಿರುತ್ತಾರೆ.

ಪ್ರಾ ಸಾ -1 ರವರಿಗೆ 1 ನೇ ಆರೋಪಿ ಚಾಕು ಹಾಕಿದ್ದರಿಂದ ಪ್ರಾ ಸಾ -1 ರವರ ಎದೆಗೆ ಮತ್ತು ಕೈಗೆ ಪೆಟ್ಟಾಗಿತ್ತು. ಪ್ರಾ ಸಾ 7 ರವರಿಗೆ ಬೆನ್ನಿಗೆ ಮತ್ತು ಹೊಟ್ಟೆಗೆ ಪೆಟ್ಟಾಗಿತ್ತು. ನಂತರ

ಪ್ರಾ ಸಾ -1 ಮತ್ತು ಪ್ರಾ ಸಾ -7 ರವರನ್ನು ರಿಪ್ಪನ್ ಪೇಟೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೊಗಿದ್ದು ಅಲ್ಲಿಂದ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

ಪ್ರಾ ಸಾ -1 ಮತ್ತು ಪ್ರಾ ಸಾ7 ರವರಿಗೆ 1 ಮತ್ತು 2 ನೇ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು ಮಾ -1 ಮತ್ತು ಮು ಮಾ -4 ಎಂದು ಗುರುತಿಸಲಾಗಿದೆ. ಆಸ್ಪತ್ರೆಯಲ್ಲಿ ಇದ್ದಾಗ ಪ್ರಾ ಸಾ -1 ರವರ ಹೇಳಿಕೆಯನ್ನು ರಿಪ್ಪನ್ ಪೇಟೆ ಪೋಲಿಸರು ಪಡೆದುಕೊಂಡಿರುತ್ತಾರೆ.

ಗಲಾಟೆಯಾದ 2-3 ದಿನಗಳ ನಂತರ ಪೋಲೀಸರು ಜಗಳ ಆದ ಸ್ಥಳಕ್ಕೆ ಮಹಜರ್ ಮಾಡಲು ನನ್ನನ್ನು ಕರೆಸಿದ್ದರು. ಗಲಾಟೆಯಾದ ಜಾಗವನ್ನು ಪೋಲೀಸರಿಗೆ ನಾನು ತೋರಿಸಿರುತ್ತೇನೆ. ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಹಜರ್ ಮಾಡಿರುತ್ತಾರೆ. ಸದರಿ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -3 ಎಂದು ಸಾಕ್ಷಿಯ ಸಹಿಯನ್ನು ನಿಪಿ -3(ಬಿ) ಎಂದು ಗುರುತಿಸಲಾಯಿತು. ನಿಪಿ -3 ರ ಸಮಯದಲ್ಲಿ ಪೋಲೀಸರು ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ -5 ಮತ್ತು ನಿಪಿ -6 ಎಂದು ಗುರುತಿಸಲಾಗಿದೆ. ನಿಪಿ -3 ರ ಸಮಯದಲ್ಲಿ ಪೋಲೀಸರು ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಸ್ಥಳ ಕಚ್ಚಾ ನಕಾಶೆ ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ನಕ್ಷೆಯನ್ನು ಈಗಾಗಲೇ ನಿಪಿ -4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -4(ಬಿ) ಎಂದು ಗುರುತಿಸಲಾಯಿತು. ನಿಪಿ -3 ಮತ್ತು ನಿಪಿ 4 ಕ್ಕೆ ನನ್ನ ಜೊತೆಯಲ್ಲಿ ಚಾಸಾ-2 ಮತ್ತು ಪ್ರಾ ಸಾ -2 ರವರು ಸಹಿ ಮಾಡಿರುತ್ತಾರೆ. ನಿಪಿ -3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -3(ಬಿ) ಎಂದು ಗುರುತಿಸಲಾಯಿತು. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನಾನು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಮಾನ್ಯ ಸ.ಅ.ರವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಗಲಾಟೆಯು ದಿನಾಂಕಃ 10-09-2019 ರಂದು ಆಗಿರುತ್ತದೆ ಎಂದರೆ ಹೌದು. ಪ್ರಾ ಸಾ -1 ಮತ್ತು ಪ್ರಾ ಸಾ 7 ರವರು 1 ನೇ ಆರೋಪಿಗೆ ವಾರ್ನ್ ಮಾಡಿದ್ದು ಈ ಬಗ್ಗೆ ಆರೋಪಿತರು ಮಾತನಾಡಿಕೊಂಡು ಪ್ರಾ ಸಾ -1 ಮತ್ತು ಪ್ರಾ ಸಾ7 ರವರನ್ನು ಸಾಯಿಸುವ ಉದ್ದೇಶದಿಂದ ಅವರನ್ನು ಸುತ್ತು ಹಾಕಿಕೊಂಡು ಅವರನ್ನು ತಪ್ಪಿಸಿಕೊಳ್ಳಲು ಬಿಡದೇ ಈ ದಿನ ಇವರನ್ನು ಬಿಡುವುದಿಲ್ಲ ಎಂದು ಹೇಳಿ ಅವರನ್ನು ನೆಲಕ್ಕೆ ಕೆಡವಿದ್ದರು ಎಂದರೆ ಹೌದು. 1 ನೇ ಆರೋಪಿ ಪ್ರಾ ಸಾ -1 ರವರಿಗೆ ನನಗೆ ವಾರ್ನ್ ಮಾಡುತ್ತೀಯ ಸೂಳೇ ಮಗನೇ ಎಂದು ಬೈದಿದ್ದಿನು ಎಂದರೆ ಹೌದು. 1 ನೇ ಆರೋಪಿ ಪ್ರಾ ಸಾ -1 ರವರ ಕುತ್ತಿಗೆಗೆ ಚಾಕುವನ್ನು ಹಾಕಲು ಬಂದಿದ್ದು ಪ್ರಾ ಸಾ -1 ರವರು ಕೊಸರಾಡಿ ತಪ್ಪಿಸಿಕೊಂಡಿದ್ದು ಆಗ ಪ್ರಾ ಸಾ 1 ರವರ ಎದೆ ಭಾಗಕ್ಕೆ ಚುಚ್ಚಿರುತ್ತಾನೆ ಎಂದರೆ ಹೌದು. 2 ನೇ ಆರೋಪಿ ಪ್ರಾ ಸಾ -7 ರವರನ್ನು ಹಿಡಿದುಕೊಂಡು ಅವನನ್ನು ಕೊಲೆ ಮಾಡುವುದಾಗಿ ಹೇಳಿ ಪ್ರಾ ಸಾ 7 ಕೆಳಗೆ ಬಿದ್ದಾಗ ತನ್ನ ಕೈಯ್ಯಲ್ಲಿದ್ದ ಚಾಕುವಿನಿಂದ ಪ್ರಾ ಸಾ7 ರವರ ಎಡ ಹೊಟ್ಟೆ ಮತ್ತು ಎಡ ಪಕ್ಕೆಯ ಭಾಗಕ್ಕೆ ಚುಚ್ಚಿದ್ದನು ಎಂದರೆ ಹೌದು.

3 ಮತ್ತು 4 ನೇ ಆರೋಪಿತರು ಅವರಿಬ್ಬರನ್ನು ಕೊಲೆ ಮಾಡಿ ಎಂದು ಹೇಳುತ್ತಾ ಪ್ರಾ ಸಾ -1 ಮತ್ತು ಪ್ರಾ ಸಾ 7 ರವರನ್ನು ಕಾಲಿನಿಂದ ತುಳಿಯುತ್ತಿದ್ದರು ಎಂದರೆ ಹೌದು. ಚಾಸಾ-13 ಮತ್ತು ಚಾಸಾ-14 ರವರು ಜಗಳವನ್ನು ಬಿಡಿಸಿದಾಗ 1 ಮತ್ತು 2 ನೇ ಆರೋಪಿತರ ಕೈಯಲ್ಲಿದ್ದ ಚಾಕು ಕೆಳಗೆ ಬಿದ್ದಿದ್ದು ಆಗ ಅವರು ಚಾಕುವನ್ನು ಎತ್ತಿಕೊಂಡು ಓಡಿ ಹೋದರು ಎಂದರೆ ಹೌದು. ಪೋಲೀಸರು ನನ್ನನ್ನು ವಿಚಾರ ಮಾಡಿದಾಗ ಈ ವಿಷಯವನ್ನು ಪೋಲೀಸರ ಮುಂದೆ ತಿಳಿಸಿರುತ್ತೇನೆ ಎಂದರೆ ಹೌದು.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**</u>

**(ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಿ ಪ್ರಕರಣವನ್ನು ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)**

**ಓ ಹೇ ಕೇ ಸ ಇದೆ**

**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಶಿವಮೊಗ್ಗ (ಪೀಠಾಸೀನ, ಸಾಗರ).**